## ಮದುವೆಗೆ ವಿಧಿವಿಧಾನಗಳ ಚೌಕಟ್ಟು

ಗಂಡು–ಹೆಣ್ಣಿನ ಸಾಂಗತ್ಯದ ಬದುಕು ಸಾಮಾಜಿಕ ಒಪ್ಪಂದ. ಅದೇ ಸಮಾಜ ಅದಕ್ಕೆ ಧಾರ್ಮಿಕ ವಿಧಿವಿಧಾನಗಳನ್ನು ತಳುಕು ಹಾಕಿದೆ. ಮುಸ್ಲಿಮರಿಗೆ 'ಮುಸ್ಲಿಮರ ವೈಯಕ್ತಿಕ ಕಾನೂನು' (ಷರಿಯತ್) ಇದ್ದಂತೆ, ಕ್ರೈಸ್ತರಿಗೆ ಧಾರ್ಮಿಕ ವಿಧಿ ವಿಧಾನಗಳು ಇವೆ. ಇಂತಹ ಮದುವೆಯನ್ನು ಮಾತ್ರ ಕಾನೂನು ಮಾನ್ಯ ಮಾಡಿದೆ. ಈ ಸಂಪ್ರದಾಯಗಳಿಗೆ ಹೊರತಾದ ಮದುವೆಯ ಆಚರಣೆಗಳೂ ಇವೆ. ಅಂತಹ ಮದುವೆಯನ್ನು 'ಮದುವೆ' ಎಂದು ಕಾನೂನು ಮಾನ್ಯ ಮಾಡುವುದಿಲ್ಲ. ಹಿಂದೂ ಮದುವೆ ಆದಲ್ಲಿ ಸಂಪ್ರದಾಯದ ಅನುಸಾರ ಮದುವೆ ಆಗಬೇಕು. ದೇವಸ್ಥಾನದಲ್ಲಿ ಹಾರ ಬದಲಿಸುವುದು, ತಾಳಿ ಕಟ್ಟುವುದು, ಇಲ್ಲವೇ ಒಂದು ಗುಂಪಿನಲ್ಲಿ ದಾಂಪತ್ಯದ ಬದುಕಿನ ಘೋಷಣೆ ಅಥವಾ ಪ್ರಮಾಣ ತೆಗೆದುಕೊಳ್ಳುವುದನ್ನು ಹಿಂದೂ ಕಾನೂನಿನ ಅನ್ವಯ ಮದುವೆ ಎಂದು ಪರಿಗಣಿಸುವುದಿಲ್ಲ ಎಂದು ಈ ಹಿಂದೆ ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿತ್ತು. ಮದುವೆಯನ್ನು ಶಾಸ್ತ್ರೋಕ್ತವಾಗಿ ಆಗಿ ಸಪ್ತಪದಿಯನ್ನು ತುಳಿದರೆ ಮಾತ್ರ ಮದುವೆ ಎಂದು ಹೈಕೋರ್ಟ್ ವ್ಯಾಖ್ಯಾನಿಸಿತ್ತು.

ಇತ್ತೀಚೆಗೆ ಸುಪ್ರೀಂ ಕೋರ್ಟ್ ಕೂಡ ಹಿಂದೂ ವಿವಾಹ ಕಾಯ್ದೆಗೆ ಅನುಗುಣವಾಗಿ ವಿವಾಹ ಆಗದೆ ಇದ್ದಲ್ಲಿ ಅದನ್ನು 'ಮದುವೆ' ಎಂದು ಮಾನ್ಯ ಮಾಡಲು ಆಗದು ಎಂದು ಸ್ಪಷ್ಟಪಡಿಸಿದೆ.

ಹಿಂದೂ ವಿವಾಹವು ಒಂದು ಸಂಸ್ಕಾರ. ಅದಕ್ಕೆ ಭಾರತೀಯ ಸಮಾಜದಲ್ಲಿ ಆದರದ್ದೇ ಆದ ಮೌಲ್ಯ ಇದೆ. ಹಿಂದೂ ವಿವಾಹದಲ್ಲಿ 'ಸಪ್ತಪದಿ' ಮಹತ್ವದ ಹೆಜ್ಜೆ ಗುರುತು. ಅದುವೇ ದಾಂಪತ್ಯದ ಹೆಗ್ಗುರುತು. ಪವಿತ್ರವಾದ ಆ ಬೆಸುಗೆಯನ್ನು ಸಂಪ್ರದಾಯಬದ್ಧವಾಗಿಯೇ ನೆರವೇರಿಸಬೇಕು. ಧಾರ್ಮಿಕ ಆಚರಣೆಗಳ ಹೊರತಾಗಿ ಮದುವೆ ಆಗದಿದ್ದರೆ ಅದನ್ನು ಹಿಂದೂ ವಿವಾಹವೆಂದು ಪರಿಗಣಿಸಲಾಗದು ಎನ್ನುವುದು ಕೋರ್ಟ್ ತೀರ್ಪಿನ ಸಾರ.



ಮೈಸೂರಿನ ಮಾನವ ಮಂಟಪದ ಆಶ್ರಯದಲ್ಲಿ 'ಮಂತ್ರ ಮಾಂಗಲ್ಯ'

ಮದುವೆಯಾಗುವವರು ತಂದಿರುತ್ತಾರೆ. ಕಷ್ಟ ಎನ್ನುವವರಿಗೆ ಮಾಂಗಲ್ಯದ ವ್ಯವಸ್ಥೆಯನ್ನೂ ಮಾಡಿ, ಸರಳ ಸಿಹಿಯೂಟದ ವ್ಯವಸ್ಥೆಯನ್ನು ಮಾಡುತ್ತಾರೆ.

ಪ್ರೇಮಿಸಿ ಮದುವೆ ಆಗುವವರು ತಕ್ಷಣಕ್ಕೆ ತಮ್ಮ ಕುಟುಂಬದ ವಿರೋಧ ಎದುರಿಸುವುದು ಕಷ್ಟ ಎನ್ನುವ ಸಂದರ್ಭದಲ್ಲಿ ಕೆಲವು ದಿನಗಳ ಕಾಲ 'ಮಾನವ ಮಂಟಪ' ವೇದಿಕೆಯ ಸದಸ್ಯರು ತಮ್ಮ ಮನೆಯಲ್ಲೇ ಆಶ್ರಯವನ್ನೂ ನೀಡುತ್ತಾರೆ. ನಂತರ ಪೋಷಕರ ಮನಪರಿವರ್ತನೆಗೆ ಪ್ರಯತ್ನ ನಡೆಸುತ್ತಾರೆ. ಎಷ್ಟೋ ವರ್ಷಗಳ ಹಿಂದೆ ಮದುವೆಯಾದವರು ಇನ್ನೂ ವೇದಿಕೆಯ ಸಂಪರ್ಕದಲ್ಲಿ ಇದ್ದಾರೆ. ಇಲ್ಲಿ ಕುವೆಂಪು ಅವರು ಹೇಳಿದ ಮಂತ್ರ ಮಾಂಗಲ್ಯದ 20 ಅಂಶಗಳನ್ನು ಓದಿ, ನವ ಜೋಡಿಯಿಂದ ಪ್ರಮಾಣ ವಚನವನ್ನು ತೆಗೆದುಕೊಂಡು, ಪರಸ್ಪರ ಗೌರವ ಮತ್ತು ಪ್ರೀತಿಯಿಂದ ಜೊತೆಯಾಗಿ ಬದುಕುವ ಭರವಸೆಯನ್ನು ಪಡೆಯಲಾಗುತ್ತದೆ. ಪ್ರಮಾಣವಚನ ಬೋಧನೆಗೆ ಮುಹೂರ್ತ ಇಲ್ಲ. ಯಾವುದೇ ಸಂಪ್ರದಾಯ, ಮೌಢ್ಯಕ್ಕೆ ಅವಕಾಶ ಇಲ್ಲ.

'ಮಾನವ ಮಂಟಪ'ದಲ್ಲಿ ಈವರೆಗೆ ಸಾವಿರಕ್ಕೂ ಹೆಚ್ಚು ಮದುವೆ ಆಗಿವೆ. ಹೆಚ್ಚಿನ ವಿವರಗಳಿಗೆ ಸಂಪರ್ಕ ಸಂಖ್ಯೆ: 9845366774

ಕುಪ್ಪಳಿಯ 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ'ವೂ ಕೋರಿಕೆಯ ಮೇರೆಗೆ 'ಹೇಮಾಂಗಣ' ವೇದಿಕೆಯಲ್ಲಿ ಮಂತ್ರಮಾಂಗಲ್ಯ ಮದುವೆಯನ್ನು ಮಾಡಿಸುತ್ತಿದೆ.

### 'ಅಮೃತಭೂಮಿ' ಸರಳತೆಯ ಹಸುರು

ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನಬೆಟ್ಟದ ತಪ್ಪಲಿನಲ್ಲಿ ರೈತ ನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಸ್ಥಾಪಿಸಿರುವ 'ಅಮೃತಭೂಮಿ' ಸಾವಯವ ಕೃಷಿ ಭೂಮಿಯಲ್ಲಿ ಇತ್ತೀಚೆಗೆ ಸರಳ ಮದುವೆಯ ಚಿಗುರು ಬೇರೂರುತ್ತಿದೆ. 'ಅಮೃತಭೂಮಿಯಲ್ಲಿ ಮದುವೆ ಆಗುವ ಅಪೇಕ್ಷೆಯನ್ನು ವ್ಯಕ್ತಪಡಿಸುವ ಜೋಡಿಗಳಿಗೆ ಸರಳ ಮತ್ತು ಆದರ್ಶ ಮದುವೆಯನ್ನು ಉಚಿತವಾಗಿ ಮಾಡುತ್ತಿದ್ದೇವೆ' ಎನ್ನುತ್ತಾರೆ ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ. ಇಲ್ಲಿ ಅಂತರ್ಜಾತಿ, ಅಂತರ್ಧರ್ಮೀಯ ಮದುವೆಗೆ ಉತ್ತೇಜನ ನೀಡಲಾಗುತ್ತಿದೆ.

'ಅಮೃತಭೂಮಿಯಲ್ಲಿ ಮಂತ್ರ ಮಾಂಗಲ್ಯ ಮದುವೆ ಮಾಡಲು ಅವಕಾಶ ಮಾಡಿಕೊಡುತ್ತೇವೆ. ಅದಕ್ಕೆ ಹಣಕಾಸು ಪಡೆಯುವುದಿಲ್ಲ. ಸಾಮೂಹಿಕ ವಿವಾಹ ಮಾಡುತ್ತಿಲ್ಲ. ಬಯಸುವ ಎಲ್ಲರಿಗೂ ವೇದಿಕೆ ನೆರವನ್ನು ನೀಡುತ್ತದೆ' ಎನ್ನುತ್ತಾರೆ



ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ ನಡೆದ ಮಂತ್ರ ಮಾಂಗಲ್ಯ